ದಿನಾಂಕಃ 17-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ದೂರುದಾರರ ಪರ ವಕೀಲರಿಂದ,

1) ನಾನು ಹಾಜರುಪಡಿಸಿರುವ ನಿಶಾನೆ ಡಿ-5 ದಾಖಲೆಯಲ್ಲಿ ಧರ್ಮಸ್ಥಳ ಸಂಘದಲ್ಲಿ ಸಾಲ ಪಡೆದಿದ್ದು, ಸದರಿ ಸಾಲದ ಕಂತುಗಳನ್ನು ದೂರುದಾರರ ಪತ್ನಿಯ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದೂರುದಾರರ ಪತ್ನಿಯ ಜೊತೆ ಸಂಘದಲ್ಲಿ ಪಡೆದ ಸಾಲದ ಬಗ್ಗೆ ಮೊಬೈಲ್ ಮೂಲಕ ಸಂಭಾಷಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಂಭಾಷಣೆಯ ದಾಖಲೆಯನ್ನು ನ್ಯಾಯಾಲಯ ಹಾಜರುಪಡಿಸಿಸಲು ತೊಂದರೆ ಇರುವುದಿಲ್ಲ. ದೂರುದಾರರು ಚೀಟಿ ವ್ಯವಹಾರ ಮಾಡುತ್ತಿದ್ದಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ.

2) ದೂರುದಾರರು ಚಂದಗಾಲು ಗ್ರಾಮದ ಗ್ರಂಥಾಲಯದ ಗ್ರಂಥಪಾಲಕರು ಎಂದರೆ ಸರಿ. ದೂರುದಾರರಿಗೆ ಮಾಸಿಕವಾಗಿ ರೂ. 25,000/- ರಿಂದ ರೂ. 30,000/- ಗೌರವ ಧನ ಸಿಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ದೂರುದಾರರ ಪತ್ನಿ ಅಂಗನವಾಡಿ ಕಾರ್ಯಕರ್ತೆ ಆಗಿರುವ ಕಾರಣ ಸಾಕಷ್ಟು ವರಮಾನ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

3) ದಿನಾಂಕ 22.05.2022 ರಂದು ನಾನು ದೂರುದಾರರು ಬಳಿ ನನ್ನ ಕಾನೂನು ಬದ್ಧ ಅವಶ್ಯಕತೆಗಾಗಿ ರೂ. 4 ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾಕಷ್ಟು ಜನರ ಬಳಿ ಸಾಲವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದೂರುದಾರರಿಂದ ಪಡೆದ ಸಾಲದ ಮರುಪಾವತಿಗಾಗಿ ನಿಶಾನೆಪಿ-1 ಚೆಕ್ಕು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 24.06.2022 ರಂದು ನನನ ಖಾತೆಯಲ್ಲಿ ಸಾಕಷ್ಟು ಹಣ ಇರಲಿಲ್ಲ. ದೂರುದಾರರು ನನಗೆ ನೀಡಿರುವ ತಿಳುವಳಿಕೆ ಪತ್ರವನ್ನು ನಾನು ಸ್ವೀಕರಿಸದೇ ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-5 ಅಂಚೆ ಲಕೋಟೆಯಲ್ಲಿರವ ವಿಳಾಸ ನನ್ನದಾಗಿರುವುದಿಲ್ಲ. ನಾನು ಸದರಿ ವಿಳಾಸದಲ್ಲಿ

ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನ್ಯಾಯಾಲಯದಿಂದ ಸದರಿ ವಿಳಾಸಕ್ಕೆ ಸಮನು ಜಾರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ದೂಡಿನಲ್ಲಿ ನಮೂದು ಮಾಡಿರುವ ವಿಳಾಸದಲ್ಲಿ ವಾಸವಾಗಿದ್ದರು ಸಹ ವಾಸ ಆಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗೋಬಿ ವ್ಯಾಪಾರ ಮಾಡುತ್ತೇನೆ. ನಾನು ದೂರುದಾರರಿಗೆ ಮೋಸ ಮಾಡಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೆ ಆರ್ ನಗರ ಬಜಾರ್ ರಸ್ತೆಯಲ್ಲಿ ಪಾನಿಪುರಿ ವ್ಯಾಪಾರ ಮಾಡುತ್ತೇನೆ. ನಿಶಾನೆ ಪಿ-5 ಅಂಚೆ ಲಕೋಟೆಯಲ್ಲಿ ನಮೂದು ಮಾಡಿರುವ ಮೊಬೈಲ್ ಸಂಖ್ಯೆ ನನ್ನದೇ ಆಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ